# ಕರ್ನಾಟಕ ಸರ್ಕಾರ

## 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.

## ಸಿ.ಸಿ.ನಂ. 10/2021

ಪಿ.ಡಬ್ಲ್ಯೂಃ 2

ಸಿ.ಡಬ್ಲ್ಯೂಃ 3

ಸಾಕ್ಷಿದಾರರ ಹೆಸರು ಃ ಷಣ್ಮುಗಪ್ಪ

ತಂದೆಯ ಹೆಸರುಃ ಃ ವೆಳ್ಳಿಯ ಗೌಂಡರ್

ವಯಸ್ಸು ಃ **75 ವರ್ಷ**

ಉದ್ಯೋಗ ಃ ವ್ಯವಸಾಯ

ವಾಸಸ್ಥಳ ಃ ಹುಣಸಘಟ್ಟ ಗ್ರಾಮ

**ದಿನಾಂಕ: 19-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ ಃ** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ಈಗ್ಗೆ ಸುಮಾರು 5 ವರ್ಷಗಳ ಹಿಂದೆ ನಾನು ಸಿದ್ದರಹಳ್ಳಿ ಗ್ರಾಮದಲ್ಲಿ ಹೊಲದಲ್ಲಿ ಸಂಜೆ 5-00 ಗಂಟೆ ಪೊಲೀಸರು ಬಂದು ಗಲಾಟೆಯಾದ ವಿಚಾರವಾಗಿ ಮಹಜರ್ ಕ್ರಮವನ್ನು ಜರುಗಿಸಿ ಛಾಯಚಿತ್ರವನ್ನು ತೆಗೆದಿರುತ್ತಾರೆ. ಸದರಿ ದಾಖಲಾತಿಗೆ ನಾನು ಸಹಿ ಮಾಡಿರುವುದಿಲ್ಲ ಹಾಗೂ ಹೆಬ್ಬೆಟ್ಟನ್ನು ಸಹ ಹಾಕಿರುವುದಿಲ್ಲ. ನನ್ನ ಸಮಕ್ಷಮದಲ್ಲಿ ಪೊಲೀಸರು ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ಸಾಕ್ಷಿಯು ನಿಪಿ-2 ರಲ್ಲಿ ತನ್ನ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸಿರುವುದಿಲ್ಲ.

ಸಾಕ್ಷಿಯು ನಿಪಿ-3 ಮತ್ತು 4 ರಲ್ಲಿ ತಮ್ಮ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ದಿನಾಂಕಃ **30-06-2020** ರಂದು ಸಂಜೆ **5-00** ರಿಂದ **6-00** ಗಂಟೆ ಸಮಯದಲ್ಲಿ ಹುಲಿತಿಮ್ಮಾಪುರ ಗ್ರಾಮದ ಸಿದ್ದರಹಳ್ಳಿ ವಾಸಿ ನಾರಾಯಣಸ್ವಾಮಿರವರ ಹೊಲದಲ್ಲಿ ಪೊಲೀಸರು ಮಹಜರ್ ಕ್ರಮವನ್ನು ಜರುಗಿಸಿದ್ದು, ಸದರಿ ಮಹಜರ್ ಗೆ ನೀವು ಬೆರಳಚ್ಚು ಮಾಡಿರುತ್ತೀರಾ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎಂದು ನುಡಿದಿರುತ್ತಾರೆ. ಆ ಸಂದರ್ಭದಲ್ಲಿ ಪೊಲೀಸರು ಒಂದು ಹಿಡಿಗಾತ್ರದ

ಕಾಡುಜಾತಿಯ ಕಲ್ಲನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆಂದರೆ ಸರಿ. ಮಹಜರ್ ನ್ನು ನಿಮಗೆ ಪೊಲೀಸರು ಓದಿ ತಿಳಿಸಿರುತ್ತಾರೆಂದರೆ ಸಾಕ್ಷಿ ಇಲ್ಲ ಎಂದುನುಡಿದಿರುತ್ತಾರೆ.

**<u>ಪಾಟೀ ಸವಾಲು : ಆರೋಪಿ ಪರ ವಕೀಲರಿಂದ.</u>**

ಆರೋಪಿ ನೀಡಿರುವ ದೂರಿನ ಮೇರೆಗೆ ನನ್ನಮೇಲೆ ಕ್ರಿಮಿನಲ್ ಮೊಕದ್ದಮೆ ಇದೆ ಎಂದರೆ ಸರಿ. ನನ್ನ ಸ್ವಂತ ಊರು ಹುಣಸಘಟ್ಟ. ಚಾಸಾ-4 ರವರು ನನ್ನ ಸಂಬಂಧಿಕರು ಎಂದರೆ ಸರಿ. ಪೊಲೀಸರು ಮಹಜರ್ ಮಾಡಿದ ದಿನಾಂಕ ನನಗೆ ನೆನಪಿಲ್ಲ. ಪೊಲೀಸರು ಯಾವುದೇ ಮಹಜರ್ ಕ್ರಮವನ್ನು ಜರುಗಿಸಿಲ್ಲ, ಹಾಗೂ ಯಾವುದೇ ವಸ್ತುವನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಹಾಗೂ ಚಾಸಾ-1 ರಿಂದ 4 ರವರಿಗೆ ಸಿವಿಲ್ ವ್ಯಾಜ್ಯ ಬಾಕಿ ಇದೆ ಎಂದರೆ ಸಾಕ್ಷಿ ಇರಬಹುದು ಎಂದು ನುಡಿದಿರುತ್ತಾರೆ.

**<u>ಮರುವಿಚಾರಣೆ</u>:** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಕೇ. ಸ. ಇ. ಎ. ಒ.

ಸಹಿ/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**